ಕರ್ನಾಟಕದ ಆಧ್ಯಾತ್ಮಿಕ ಪರಂಪರೆ

# ಆಧ್ಯಾತ್ಮಿಕ ಸಾಧಕ: ಬಸವಣ್ಣ

ಡಾ. ಎಂ.ಚಿದಾನಂದ ಮೂರ್ತಿ

(ಕರ್ನಾಟಕವು ಧರ್ಮಸಾಮರಸ್ಯದ ನೆಲೆವೀಡು. ಜೈನ-ಶೈವ-ವೈಷ್ಣವ ಮುಂತಾದ ಹಲವು ಮತಪಂಥಗಳಿಗೆ ಸೇರಿದ ನೂರಾರು ಮಹಾಪುರುಷರು ಇಲ್ಲಿ ಜನ್ಮತಳೆದು ಈ ನಾಡನ್ನು ಆಧ್ಯಾತ್ಮಿಕವಾಗಿ ಸಂಪದ್ಭರಿತವಾಗಿಸಿದ್ದಾರೆ. ಅವರ ಪರಿಚಯದಿಂದ ನಮ್ಮ ನಾಡಿನ ಬಗ್ಗೆ ಹೆಮ್ಮೆ ಮೂಡುವುದಲ್ಲದೆ, ನಮ್ಮ ಅಮೋಘ ಆಧ್ಯಾತ್ಮಿಕ ಪರಂಪರೆಯ ಭವ್ಯ ದರ್ಶನ ಹಾಗೂ ಆ ಪುಣ್ಯಪುರುಷರ ಬೋಧನೆಗಳ ಅಮೃತಸಿಂಚನ ನಮಗಾಗುವುದು. ಈ ಉದ್ದೇಶದಿಂದಲೇ 'ವಿವೇಕಪ್ರಭ', ಈ ನಾಡು ಕಂಡ ಮಹಾ ಮಾನವತಾವಾದಿ ಬಸವಣ್ಣನವರ ಜಯಂತಿಯ ಈ ಶುಭ ಸಂದರ್ಭದಲ್ಲಿ, ಕನ್ನಡ ನಾಡಿನ ಆಧ್ಯಾತ್ಮಿಕ ಚೇತನಗಳ ಪರಿಚಯವನ್ನು ಮಾಡಿಕೊಡುವ ಈ ಅಂಕಣವನ್ನು ಆರಂಭಿಸಿದೆ. ಈ ಅಂಕಣದಲ್ಲಿ, ಆಯಾ ಕ್ಷೇತ್ರಗಳಲ್ಲಿ ಪರಿಣಿತರಾದ ಲೇಖಕರು ವ್ಯಕ್ತಿಪರಿಚಯಕ್ಕಿಂತ ಹೆಚ್ಚಾಗಿ ಮಹಾಪುರುಷರ ಅನುಭಾವ, ತತ್ತ್ವ ಮತ್ತು ಬೋಧನೆಗಳನ್ನು ನಿರೂಪಿಸಲಿದ್ದಾರೆ. ಇದಕ್ಕೆ ದಯವಿಟ್ಟು ನಿಮ್ಮ ವಿಮರ್ಶಾತ್ಮಕ ಅನಿಸಿಕೆಗಳನ್ನು ಬರೆದು ಕಳಿಸಿ- ಸಂ.)

ಬಯಲರೂಪ ಮಾಡಬಲ್ಲಾತನೆ ಶರಣನು
ಆ ರೂಪ ಬಯಲ ಮಾಡಬಲ್ಲಾತನೆ ಲಿಂಗಾನುಭವಿ
ಬಯಲ ರೂಪ ಮಾಡಲರಿಯದಿದ್ದಡೆ ಎಂತು ಶರಣೆಂಬೆ?
ಆ ರೂಪ ಬಯಲು ಮಾಡಲರಿಯದಿದ್ದಡೆ ಎಂತು
ಲಿಂಗಾನುಭವಿಯೆಂಬೆ?
ಈ ಉಭಯ ಒಂದಾದಡೆ ನಿಮ್ಮಲ್ಲಿ ತೆರಹುಂಟೆ
ಕೂಡಲಸಂಗಮದೇವಾ

ಬಸವಣ್ಣನವರ ಮೇಲಿನ ವಚನವು ಬಹು ಅರ್ಥಗರ್ಭಿತ ಮಾತ್ರವಲ್ಲ, ಒಂದು ರೀತಿಯಲ್ಲಿ ವೀರಶೈವ ಸಿದ್ಧಾಂತವು ಒಬ್ಬ ಆಧ್ಯಾತ್ಮಿಕ ಸಾಧಕನ ಬಗ್ಗೆ ತಾಳಿರುವ ನಿಲುವನ್ನು ಸ್ಪಷ್ಟವಾಗಿ ದಾಖಲಿಸುತ್ತದೆ. ವಿಶ್ವದ ಹಿಂದಿನ ಚೈತನ್ಯಸ್ವರೂಪಿಯಾದ ಈಶ್ವರೀ ಶಕ್ತಿಯು ಸರ್ವಶಕ್ತ, ಅಗೋಚರ, ನಿರಾಕಾರ, ಸರ್ವಮಯ, ಸರ್ವಜ್ಞ; ಆ ಚೈತನ್ಯವನ್ನು ಸಾಮಾನ್ಯರು ಗ್ರಹಿಸಲಾರರು-ಅವರಿಗೆ ಒಂದು ನಿರ್ದಿಷ್ಟ ರೂಪ, ಹೆಸರು ಇರುವ ಭೌತಿಕವಸ್ತುವು ಅಗತ್ಯ. ಆ ಪೂಜಾರ್ಹ ರೂಪವು ಸಾಧಕರಿಗೆ ಸಾಧನೆ ಮಾಡಲು ಒಂದು ದೀವಿಗೆಯಾಗುತ್ತದೆ, ಭಗವಂತನೆಡೆಗೆ, ಭಗವತ್ ಸ್ವರೂಪದ ಕಡೆಗೆ ಸಾಗಲು ಒಂದು ದಾರಿ ನಾಮಫಲಕವಾಗುತ್ತದೆ. ಅದೇ ವೀರಶೈವರಿಗೆ ಒಂದು ನಿರ್ದಿಷ್ಟ ರೂಪದ ಶಿವಲಿಂಗ ( ವೈಷ್ಣವರಿಗೆ ಶಾಲಗ್ರಾಮ ಆಗಬಹುದು; ಶೈವ ವೈಷ್ಣವರಿಗೆ ಶಿವ, ವಿಷ್ಣು ಮೂರ್ತಿಗಳೇ ಆಗಬಹುದು). 'ಶರಣ'ನಿಗೆ ಎಂದರೆ, ಭಗವಂತನಲ್ಲಿ ಸಂಪೂರ್ಣವಾಗಿ ಅರ್ಪಿಸಿಕೊಂಡ ಭಕ್ತನಿಗೆ, ಅದು ಎಂದರೆ, ಆ ಶಿವಲಿಂಗ ತಾನೇ ಗುರಿಯಲ್ಲ; ಗುರಿ ತಲುಪಲು ಒಂದು ಮಾರ್ಗ. 'ಬಯಲು' ಒಂದು 'ರೂಪ' ವನ್ನು ಪಡೆದುಕೊಂಡದ್ದೇ ಶಿವಲಿಂಗ. ಶರಣನು ಆ ಶಿವಲಿಂಗವನ್ನು ಜಲ, ಪುಷ್ಪ, ವಿಭೂತಿಗಳಿಂದ ಪೂಜಿಸುತ್ತ ಏಕಾಗ್ರಚಿತ್ತತೆಯನ್ನು ಸಾಧಿಸುತ್ತ, ಬಹಿರ್ಮುಖಿಯಾಗಿದ್ದವನು ಕ್ರಮೇಣ ಅಂತರ್ಮುಖಿ ಆಗುತ್ತಾನೆ.



ಅವನು ಪೂಜಿಸುತ್ತಿದ್ದ ಶಿವಲಿಂಗವು ಕ್ರಮೇಣ ಅವನ ಮನಸ್ಸಿಗೆ ಸಮೀಪವಾಗುತ್ತ ತನ್ನ ಬಹಿರಂಗ ಆಕಾರವನ್ನು ಕಳೆದುಕೊಳ್ಳುತ್ತ, ಅದು ಯಾವುದರ ಸಂಕೇತವೋ ಆ ಅಮೂರ್ತ ಚೈತನ್ಯ ಶಕ್ತಿಯಾಗಿ, ಆ ಚೈತನ್ಯಶಕ್ತಿಯು ನಾನೇ, ನಾನೇ ಆ ಪರಾತ್ಪರ ಚೈತನ್ಯ ಎಂಬ ಅರಿವು ಉಂಟಾಗುತ್ತದೆ. ಅದೇ ಆ ಸಾಧನೆಯ ಗುರಿ. ಶರಣನ ಹಂತದಲ್ಲಿ ಬಯಲು ಒಂದು ರೂಪ ಆಗಿತ್ತು. 'ಅನುಭಾವಿ'ಯ ಹಂತದಲ್ಲಿ ಆ ರೂಪವು 'ಬಯಲು' ಆಗುತ್ತದೆ. ಆ ಬಯಲೇ ಸಂಸ್ಕೃತದ 'ಶೂನ್ಯ' - ಶೂನ್ಯಸಂಪಾದನೆಯೇ ಷಟ್‌ಸ್ಥಲ ಸಾಧನೆಯ ಅಥವಾ ಎಲ್ಲ ಆಧ್ಯಾತ್ಮಿಕ ಸಾಧಕರ ಪರಮೋಚ್ಚ ಧ್ಯೇಯ. ವಚನಗಳ ಹದಿನೈದನೇ ಶತಮಾನದ ಒಂದು ಸಂಕಲನದ ಹೆಸರೇ 'ಶೂನ್ಯ ಸಂಪಾದನೆ'(ಮೂಲಕೃತಿ ಸೇರಿದಂತೆ ಇದರ ನಾಲ್ಕು ಪರಿಷ್ಕರಣಗಳಿವೆ).

**ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ** - ಇವು ಮೇಲೆ ಹೇಳಿದ ಆರು ಷಟ್‌ಸ್ಥಲಗಳು. 'ಭಕ್ತ'ನಾಗಿ ಆರಂಭಗೊಂಡ, ತಾನು ಭಗವಂತನ ಭಕ್ತನೆಂಬ ದ್ವೈತಸ್ಥಿತಿಯ ಸಾಧನೆಯಿಂದ, ತಾನೇ ಆ ಚಿದಾಕಾರ ಪರಬ್ರಹ್ಮ ವಸ್ತು, 'ಶಿವೋಽಹಂ' (ನಾನೇ ಶಿವ) ಎಂಬ ಸ್ಥಿತಿಗೆ ಏರುವುದೇ ಅಂತಿಮವಾದ ಐಕ್ಯಸ್ಥಲ. 'ಲಿಂಗಾನುಭವಿ' ಎಂಬ ಸಮಾಸಪದದ ಉತ್ತರಾರ್ಧವಾದ 'ಅನುಭಾವ' ಪದವು ಇಂಗ್ಲೀಷಿನ Mysticism ಪದಕ್ಕೆ ಸಮನಾದುದು.

ಮಂಜುಗಡ್ಡೆ, ನೀರು, ಆವಿ - ಇವುಗಳಲ್ಲಿ ನಿಜವಾದ ರೂಪ ಯಾವುದು? ಮೂರೂ ನೀರಿನ ಪ್ರಭೇದಗಳೇ; ಮಂಜುಗಡ್ಡೆಗೆ ಒಂದು ನಿರ್ದಿಷ್ಟ ಆಕಾರವುಂಟು; ಆ ಆಕಾರವು ನೀರಿನಲ್ಲಿ ಶಿಥಿಲಗೊಳ್ಳುತ್ತದೆ; ಆವಿಯಲ್ಲಿ ಆಕಾರವು ಸಂಪೂರ್ಣವಾಗಿ ನಷ್ಟವಾಗುತ್ತದೆ. ಭಕ್ತಸ್ಥಲದಿಂದ ಐಕ್ಯಸ್ಥಲಕ್ಕೆ ಕ್ರಮಿಸುವ ಪಥವು ಮಂಜುಗಡ್ಡೆ, ನೀರು, ಆವಿ - ಈ ಆವಿಷ್ಕಾರವನ್ನು ಸ್ಥೂಲವಾಗಿ ಹೋಲುತ್ತದೆ.

ಬಸವಣ್ಣನವರು ತಮ್ಮ ನಿರಂತರ ಸಾಧನೆಯಿಂದ 'ಶರಣ' ಸ್ಥಿತಿಯಿಂದ 'ಐಕ್ಯ' ಸ್ಥಿತಿಗೆ ಏರಿದವರು. ಅವರ ವಚನಗಳಲ್ಲಿ ಭಕ್ತನಾಗಿದ್ದ ಅವರು ಕ್ರಮಕ್ರಮೇಣ ವಿಕಾಸ ಹೊಂದುತ್ತ ಬಂದುದರ ಒಂದು

ಸ್ಥೂಲ ಚಿತ್ರ ನಮಗೆ ದೊರಕುತ್ತದೆ. ಮೊದಲು ಲಿಂಗಧಾರಣೆ ಮಾಡುವ ಮತ್ತು ಶಾಸ್ತ್ರೋಕ್ತ ಕರ್ಮ-ವಿಧಿವಿಧಾನಗಳಿಂದ ಇಷ್ಟಲಿಂಗ ಪೂಜೆ ಮಾಡುವ ಶೈವಧರ್ಮದ ಜಟಿಲತೆಯಿಂದ ಸರಳ ಭಕ್ತಿ ಶ್ರದ್ಧೆಗಳ ವೀರಶೈವ ಮಾರ್ಗಕ್ಕೆ ಬಂದುದಾಗಿ ಅವರೇ ಹೇಳಿಕೊಂಡಿದ್ದಾರೆ. ವೀರಶೈವ ಭಕ್ತಿಯು ಮುಗ್ಧಶ್ರದ್ಧಾಮೂಲವಾದುದು. ಅವರು ತಮ್ಮ ಸಾಧನೆಯ ಆರಂಭದಲ್ಲಿ ಹೇಗೆ ಮನಸ್ಸು, ಲಿಂಗದಲ್ಲೇ ಮಗ್ನವಾಗದೆ, ಮತ್ತೆ ಮತ್ತೆ ಲೌಕಿಕ ವಿಷಯಗಳತ್ತ, ಇಂದ್ರಿಯ ಸುಖಗಳತ್ತ ಧಾವಿಸುತ್ತ ತಮ್ಮ ಸಾಧನೆಗೆ ಅಡ್ಡಿಯಾಗುತ್ತಿತ್ತು ಎಂಬುದನ್ನು ಬಹು ನೋವಿನಿಂದ ಹಲವು ಕಡೆ ಹೇಳಿಕೊಂಡಿದ್ದಾರೆ. "ನೀನೊಂದ ನೆನೆದಡೆ ತಾನೊಂದ ನೆನೆವುದು" – ಇಂತಹ ವಚನಗಳು ಅವರ ಮಾನಸಿಕ ತುಮುಲಾಟಕ್ಕೆ ಸಾಕ್ಷಿಯಾಗಿವೆ. ಲಿಂಗದಲ್ಲಿ ನಿಷ್ಠೆಯನ್ನು ದೃಢಗೊಳಿಸಿಕೊಂಡು, ಶಿವನೊಬ್ಬನೇ ದೈವ, ಶಿವಭಕ್ತರೇ ಶ್ರೇಷ್ಠ ಎಂಬ ತೀವ್ರ ನಿಷ್ಠೆಯನ್ನು, ಒಂದು ರೀತಿಯಲ್ಲಿ ಛಲದ ಭಕ್ತಿಯನ್ನು ಬೆಳೆಸಿಕೊಳ್ಳುವುದೇ **ಮಾಹೇಶ್ವರ ಸ್ಥಲ**. ಈ ತೀವ್ರ ನಿಷ್ಠೆಯು ಸಾಧಕನ ಸಾಧನೆಯ ದೃಢನಿರ್ಧಾರವನ್ನು ಬಲಪಡಿಸುತ್ತದೆ. ಈ ನಿಷ್ಠೆ ಶಿವಭಕ್ತಿಯನ್ನು ಆಧರಿಸಿದೆಯೇ ಹೊರತು, ಶಿವಭಕ್ತರ ಹುಟ್ಟುಜಾತಿಗಳನ್ನಲ್ಲ. "ಆವ ಕುಲವಾದಡೇನು? ಶಿವಲಿಂಗವಿದ್ದವನೆ ಕುಲಜನು" ಎಂಬ ಅವರ ವಚನವನ್ನು ಗಮನಿಸ ಬೇಕು. ಮೈಮೇಲೆ ಶಿವಲಿಂಗ ಧರಿಸಿದರೆ ಸಾಕು, ಬ್ರಾಹ್ಮಣನಾಗಲಿ ಅಂತ್ಯಜನಾಗಲಿ ಎಲ್ಲರೂ ಸಮಾನ ಕುಲದವರೇ.

ಮನಸ್ಸು ಶಿವನಲ್ಲಿ, ಶಿವಭಕ್ತರಲ್ಲಿ ತೀವ್ರವಾದ ಭಕ್ತಿಯನ್ನು ಬೆಳೆಸಿ ಕೊಂಡು ಮುಂದುವರಿಯುತ್ತ, ಆ ತೀವ್ರ ನಿಷ್ಠೆ ಕ್ರಮೇಣ ಶಿವನ ಹಾಗೂ ಶಿವನ ಅನುಯಾಯಿಗಳ ವಿಷಯದಲ್ಲಿ ಒಂದು ಬಗೆಯ ಸೇವಕ ಮನೋಭಾವವನ್ನು ಬೆಳೆಸುತ್ತದೆ. ಮಾಹೇಶ್ವರ ನಿಷ್ಠೆಯು ವ್ಯಕ್ತಿಯ ಅಹಂಕಾರವು ಬೆಳೆಯಗೊಡದಂತೆ ನೋಡಿಕೊಂಡು, ಅದು ಸಾಧಕನಲ್ಲಿ ಅಕೃತಕವಾದ ವಿನಯವನ್ನೂ ಶಿವಭಕ್ತರ ವಿಷಯದಲ್ಲಿ ಒಂದು ಬಗೆಯ ದಾಸ್ಯ ಮನೋಧರ್ಮವನ್ನೂ ಬೆಳೆಸುತ್ತದೆ. ಶಿವಭಕ್ತರು ಉಂಡು ಬಿಟ್ಟದ್ದು ಸಾಧಕನಿಗೆ ಪ್ರಸಾದವಾಗುತ್ತದೆ – ಏಕೆಂದರೆ, ಆ ಶಿವಭಕ್ತರು ಒಂದು ರೀತಿಯಲ್ಲಿ ಶಿವನೇ. ಮಾದಾರ ಚನ್ನಯ್ಯನ ಬಗ್ಗೆ ಒಂದು ಕತೆಯನ್ನು ಬಸವಣ್ಣ ನೆನೆಸಿಕೊಂಡಿದ್ದಾರೆ: ಮನೆಯಲ್ಲಿ ಮಾಡಿದ ಅಂಬಲಿಯು ಚನ್ನಯ್ಯನಿಗೆ ಬಹಳ ರುಚಿಯಾಗಿತ್ತು. ಆ ಎಂಜಲ ಅಂಬಲಿ ಶಿವನಿಗೆ ಪ್ರಿಯವಾಗುತ್ತದೆಯೆಂದು ಅದನ್ನು ಶಿವನಿಗಾಗಿ ಚನ್ನಯ್ಯ ಕಾಯ್ದಿರಿಸಿದನಂತೆ. ಅನ್ಯರು ಸಿದ್ಧಪಡಿಸಿದ ಭಕ್ಷ್ಯಭೋಜ್ಯಗಳಿಗಿಂತ ಮಾದಿಗರ ಜಾತಿಯ ಚನ್ನಯ್ಯನು ಕುಡಿದು ಬಿಟ್ಟ ಅಂಬಲಿಯೇ ಶಿವನಿಗೆ ಹೆಚ್ಚು ರುಚಿಸಿತು. ಶಿವಸಾಧಕನಿಗೆ ಇಡೀ ಬದುಕೇ ಒಂದು ರೀತಿಯಲ್ಲಿ, ಶಿವ ಕರುಣಿಸಿದ 'ಪ್ರಸಾದ'– ಶಿವ ಅನುಭಾವಿಗೆ ನೀಡಿದ್ದು. ಇಲ್ಲಿ ಶಿವ ಮತ್ತು ಶಿವಭಕ್ತ– ಇಬ್ಬರೂ ಅಭಿನ್ನರು.

ಹೀಗೆ ಅಂತರ್ಮುಖಿಯಾಗುತ್ತ ನಡೆವ ಶಿವಸಾಧಕನಿಗೆ ತನ್ನ ಒಳಗೆ ಶಿವ ಇರುವ ಅನುಭವವಾಗುವುದೇ **ಪ್ರಾಣಲಿಂಗಿ ಸ್ಥಳ**. ಹೊರಗಿನ ಇಷ್ಟಲಿಂಗವು ತನ್ನ ಒಳಗಿನ ಜೀವವಾಗಿ, ಪ್ರಾಣವಾಗಿ ಅನುಭವಕ್ಕೆ ಬರುತ್ತದೆ.

**ಉಳ್ಳವರು ಶಿವಾಲಯವ ಮಾಡುವರು**
**ನಾನೇನ ಮಾಡುವೆ, ಬಡವನಯ್ಯಾ**
**ಎನ್ನ ಕಾಲೇ ಕಂಬ, ದೇಹವೇ ದೇಗುಲ**
**ಶಿರ ಹೊನ್ನ ಕಳಶವಯ್ಯಾ,**
**ಕೂಡಲಸಂಗಮದೇವಾ, ಕೇಳಯ್ಯಾ**
**ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ**

ದೇಹವೇ ದೇವಾಲಯವಾಗಿ ಮಾರ್ಪಾಡಾದುದು ಒಂದು ಅನುಭವ. ಹೊರಗಿನ ದೇವಾಲಯದ ಶಿವಲಿಂಗಕ್ಕಾಗಲಿ ಮೈಮೇಲಿನ ಇಷ್ಟಲಿಂಗಕ್ಕಾಗಲಿ ಸಾವು ಅಥವಾ ವಿನಾಶ ಇರಬಹುದು; ಆದರೆ ಒಳಗೆ ಮಿಂಚಿರುವ ಆ ಬೆಳಕಿನ ಲಿಂಗಕ್ಕೆ ಸಾವು ಎಲ್ಲಿಯದು? ಹೊರಗಿನ ಇಷ್ಟಲಿಂಗ ಒಳಗಿನ ಭಾವಲಿಂಗವಾದಾಗ ವ್ಯಕ್ತಿ ಆ ಚಿಚ್ಛಕ್ತಿಗೆ ಸಮೀಪವರ್ತಿಯಾಗಿದ್ದಾನೆಂದೇ ಅರ್ಥ.

ಪ್ರಾಣಲಿಂಗಿಯಾದವನು ವಿಕಾಸ ಹೊಂದುತ್ತ ಬಂದಂತೆ, ಅವನ ನಿದ್ದೆಯೇ ಜಪವಾಗುತ್ತದೆ; ಅವನು ನಡೆದುದೇ ಪಾವನವಾಗುತ್ತದೆ; ಅವನ ಬಾಯಿಗೆ ಬರುವುದೆಲ್ಲ ಶಿವತತ್ತ್ವವೇ ಆಗುತ್ತದೆ. "ಕೂಡಲ ಸಂಗನ ಶರಣನ ಕಾಯವೆ ಕೈಲಾಸ ಕಾಣಿರೋ."

ಮುಂದಿನ ಹಂತವಾದ **ಐಕ್ಯಸ್ಥಲದಲ್ಲಿ** 'ಘನ'ವಾಗಿದ್ದುದು 'ಘನ'ವಾಗುವುದರ ಸ್ವರೂಪದ ಬೆಳಗೇ ಆಗಿದ್ದುದು 'ಮಹಾಬೆಳಗು' ಆದುದರ ಅನುಭವ ಅವರ್ಣನೀಯ, ಮಾತಿಗೆ ಮೀರಿದ್ದು.

**ಘನಗಂಭೀರ ಮಹಾಘನದೊಳಗೆ**
**ಘನಕ್ಕೆ ಘನವಾಗಿದ್ದೆನಯ್ಯಾ**
**ಕೂಡಲಸಂಗಮ ದೇವಯ್ಯನೆಂಬ**
**ಮಹಾಬೆಳಗಿನ ಬೆಳಗಿನೊಳಗಿದ್ದೇನೆಂಬ**
**ಶಬ್ದಮುಗ್ಧವಾಗುವನೇನೆಂಬೆನಯ್ಯಾ**

ಕೂಡಲಸಂಗಮ ಎಂಬ ಬೆಳಗಿನೊಳಗೆ ಸಾಧಕ ಒಂದಾದ ಆ ಮನಸ್ಥಿತಿಯನ್ನು ಯಾವ ಶಬ್ದವೂ, ಭಾಷೆಯೂ ವಿವರಿಸಲಾರದು; ಭಾಷೆ ಇಲ್ಲಿ ಸೋಲುತ್ತದೆ; ಅನುಭಾವಿಯ ಆ ಅನುಭವ ಮನಸ್ಸು ಮೀರಿದ್ದು; ಆ ಆನಂದ ನಿರುಪಮವಾದುದು. ದಾಸೋऽಹಂ – ನೀನು ಶಿವನ ದಾಸ ಎಂಬ ಸ್ಥಿತಿಯಿಂದ ಶಿವೋऽಹಂ–ನಾನೇ ಶಿವ ಎಂಬ ಸ್ಥಿತಿಗೆ ಏರುವುದೇ ಸಿದ್ಧಿ; ಎಲ್ಲ ಆಧ್ಯಾತ್ಮಿಕ ಸಾಧಕರ ಪರಮಗುರಿ.

ವೀರಶೈವ ದರ್ಶನವನ್ನು 'ದ್ವೈತಾದ್ವೈತ' ಎಂದು ವಚನಕಾರರೇ ಹೆಸರಿಸಿರುವುದು ಅರ್ಥಪೂರ್ಣ. 'ಭಕ್ತ'ನಿಂದ 'ಐಕ್ಯ'ದವರೆಗಿನ ಮಾರ್ಗವು ಸಾಧಕ ಕ್ರಮಿಸುವ ಪಥ.

ಬಸವಣ್ಣ ಮತ್ತು ಅವರ ಸಮಕಾಲೀನ ಶರಣರ ಆಧ್ಯಾತ್ಮಿಕ ದೃಷ್ಟಿಕೋನ ಬರೀ ಪರಲೋಕದತ್ತ ಬಾಗಿರುವುದಲ್ಲ; ಈ ಲೋಕದ ಬದುಕೂ ಅವರಿಗೆ ಅಷ್ಟೇ ಮುಖ್ಯವಾಗಿತ್ತು. ತಾವೂ ಸುಧಾರಣೆ ಪಡೆದು, ಜಗತ್ತನ್ನೂ ಸುಧಾರಿಸುವುದು ಅವರ ಧ್ಯೇಯವಾಗಿತ್ತು. ಬಸವಣ್ಣ ಹೇಗೆ ಆಧ್ಯಾತ್ಮಿಕ ಸಾಧಕರೋ ಅಂತೆಯೇ ಸಮಾಜ ಸುಧಾರಕರೂ ಹೌದು. "ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರು"– ಅವರ ಈ ಮಾತು ಅವರ ಬಗ್ಗೆ ಎಲ್ಲವನ್ನೂ ಧ್ವನಿಸುತ್ತದೆ. ಅಲ್ಲಮಪ್ರಭು ಅವರನ್ನು **"ಯುಗದ ಉತ್ಸಾಹ"** ಎಂದು ಕರೆದಿರುವುದು ಅವರ ಬಗ್ಗೆ ಹೇಳಬೇಕಾದ ಎಲ್ಲವನ್ನೂ ಹೇಳುತ್ತದೆ. ■